


ಭಗವದಾನಂದ

"ಒಮ್ಮೆ ಭಗವದಾನಂದ ದೊರೆತುದೇ ಆದರೆ, ವಿಚಾರ ಬುದ್ಧಿ ಕಾಲಿಗೆ ಬುದ್ಧಿ ಹೇಳುತ್ತದೆ. ಮಧುಪಾನದ ಆನಂದ ದೊರೆತಾಗ ದುಂಬಿಯ ಝೇಂಕೃತಿಯೆಲ್ಲ ಅಡಗಿಹೋಗುತ್ತದೆ. ಪುಸ್ತಕ ಓದಿ ಒಂದೆರಡು ಮಾತಾಡುವುದನ್ನು ಕಲಿತುಬಿಟ್ಟರೆ ಏನಾದ ಹಾಗಾಯಿತು? ಪಂಡಿತರು ಕೇವಲ ಶ್ಲೋಕ ಹೇಳು ವುದರಲ್ಲೇ ತೃಪ್ತರು.

"ಬಾಯಲ್ಲಿ ಸುಮ್ಮನೆ 'ಬಂಗಿಸೊಪ್ಪು, ಬಂಗಿಸೊಪ್ಪು' ಅಂತ ಹೇಳುತ್ತಿದ್ದರೆ ಏನಾಗುತ್ತದೆ? ಅದರ ರಸವನ್ನು ಬಾಯಿಂದ ಮುಕ್ಕಳಿಸಿದರೂ ಏನೂ ಆಗದು. ಅದು ಹೊಟ್ಟೆಗೆ ಹೋಗಿ ಬೀಳಬೇಕು. ಆಗ ಮಾತ್ರವೇ ನಶೆ ಹತ್ತುತ್ತದೆ. ನಿರ್ಜನ ಪ್ರದೇಶದಲ್ಲಿ ಏಕಾಂಗಿಯಾಗಿ ಇದ್ದು ವ್ಯಾಕುಲಚಿತ್ತದಿಂದ ಭಗ ವಂತನನ್ನು ಕರೆಯದೆ ಇದ್ದರೆ ಇದೆಲ್ಲ ಅರ್ಥವಾಗುವುದಿಲ್ಲ."

ಶ್ರೀರಾಮಕೃಷ್ಣರು (ಗಿರೀಶ, ಮಾಸ್ಟರ್ ಮತ್ತು ಉಳಿದ ಭಕ್ತರಿಗೆ): "ಇವರು ಯಾವ ರೀತಿಯ ಮನುಷ್ಯರು ಎಂಬುದು ಗೊತ್ತೆ? ಇವರನ್ನು ಎಂದೂ ನೆಲವನ್ನೇ ಕಾಣದ ಬಾವಿಕಪ್ಪೆಗೆ ಹೋಲಿಸಬಹುದು. ಬಾವಿಕಪ್ಪೆಗೆ ತನ್ನ ಬಾವಿ ಇರುವುದು ಮಾತ್ರವೇ ಗೊತ್ತಿದೆ; ಅದಕ್ಕಾಗಿ ಅದು ನೆಲ ಎಂಬುದೊಂದು ಇದೆ ಎಂಬುದನ್ನು ನಂಬುವುದೇ ಇಲ್ಲ. ಇದೇ ರೀತಿಯಾಗಿ ಇವರಿಗೆ ಭಗವದಾನಂದವನ್ನು ಸವಿಯುವ ಸೌಲಭ್ಯವೇ ದೊರೆಯದೆ ಇರುವುದರಿಂದ 'ಸಂಸಾರ' ಅಂತ ತಲೆ ಚಚ್ಚಿ ಕೊಳ್ಳುತ್ತಿದ್ದಾರೆ.

"ಯಾರದು ಯಾವ ತರದ ಬಂಡವಾಳವೋ ಅದಕ್ಕನು ಗುಣವಾಗಿ ಅವರು ವಸ್ತುಗಳಿಗೆ ಬೆಲೆ ಕಟ್ಟುತ್ತಾರೆ. ಒಬ್ಬ ಧನಿಕ ತನ್ನ ಸೇವಕನಿಗೆ ಹೇಳಿದ: 'ನೀನು ಈ ವಜ್ರವನ್ನು ಪೇಟೆಗೆ ತೆಗೆದುಕೊಂಡು ಹೋಗಿ ಇದಕ್ಕೆ ಯಾರ್‍ಯಾರು ಎಷ್ಟೆಷ್ಟು ಬೆಲೆ ಕಟ್ಟುತ್ತಾರೆ ಎಂಬುದನ್ನು ತಿಳಿದುಕೊಂಡು ಬಾ. ಮೊದಲು ಇದನ್ನು ಬದನೆಕಾಯಿ ಮಾರುವವನ ಹತ್ತಿರ ತೆಗೆದುಕೊಂಡು ಹೋಗು.' ಅಂತೆಯೇ ಆ ಸೇವಕ ಮೊದಲು ಆ ವಜ್ರವನ್ನು ಬದನೇಕಾಯಿ ಮಾರುವವನ ಹತ್ತಿರಕ್ಕೆ ತೆಗೆದುಕೊಂಡು ಹೋದ. ಆತ ಆ ವಜ್ರವನ್ನು ತಿರುಗಿಸಿ ತಿರುಗಿಸಿ ನೋಡಿ ಮಾಡಿ ಹೇಳಿದ, 'ನೋಡು, ನಾನು ಇದಕ್ಕೆ ಒಂಬತ್ತು ಸೇರು ಬದನೆಕಾಯಿ ಕೊಡಬಲ್ಲೆ' ಅಂತ. ಸೇವಕ ಹೇಳಿದ, 'ಅದಕ್ಕಿಂತ ಇನ್ನೂ ಸ್ವಲ್ಪ ಜಾಸ್ತಿಯಾಗಿ—ಹೋಗಲಿ, ಹತ್ತು ಸೇರು' ಅಂತ. ಅಂಗಡಿಯವ ಹೇಳಿದ, 'ಇಲ್ಲ, ನಾನು ಆಗಲೆ ಪೇಟೆ ಧಾರಣೆ ಗಿಂತ ಸ್ವಲ್ಪ ಅಧಿಕವಾಗಿಯೇ ಹೇಳಿಬಿಟ್ಟೆ. ನಿನಗೆ ಸಮ್ಮತ ವಾದರೆ ಕೊಟ್ಟು ಹೋಗು, ಇಲ್ಲದಿದ್ದರೆ ಹಾಗೇ ಹೋಗು' ಅಂತ. ಸೇವಕ ನಗುತ್ತನಗುತ್ತ ಆ ವಜ್ರವನ್ನು ವಾಪಸ್ಸು ತೆಗೆದುಕೊಂಡು ಬಂದು ಯಜಮಾನನಿಗೆ ತಿಳಿಸಿ, 'ಸ್ವಾಮಿ, ಬದನೆಕಾಯಿ ಮಾರುವವನು ಒಂಬತ್ತು ಸೇರು ಕಾಯಿಗಿಂತ ಅಧಿಕವಾಗಿ ಏನನ್ನೂ ಕೊಡಲಾಗುವುದಿಲ್ಲವಂತೆ ಮತ್ತು ಆತ ಪೇಟೆಧಾರಣೆಗಿಂತ ಅಧಿಕವಾಗಿಯೇ ಹೇಳಿಬಿಟ್ಟಿದ್ದಾನಂತೆ' ಅಂತ. ಯಜಮಾನ ನಕ್ಕು ಹೇಳಿದ, 'ಹೋಗಲಿ, ಈಗ ಜವಳಿ ವ್ಯಾಪಾರಿಯ ಹತ್ತಿರ ಹೋಗಿ ಬಾ. ಈಗ ನೀನು ತೋರಿಸಿ ಬಂದವನು ಬರೀ ಬದನೆಕಾಯಿ ವ್ಯಾಪಾರಿ. ಆತನಿಗೆ ವಜ್ರದ ಬೆಲೆ ಏನು ಗೊತ್ತು? ಜವಳಿ ವ್ಯಾಪಾರಿಯ ಬಂಡವಾಳ ಈತನದಕ್ಕಿಂತ ಸ್ವಲ್ಪ ಹೆಚ್ಚಿನದು. ನೋಡೋಣ, ಆತ ಇದಕ್ಕೆ ಏನು ಬೆಲೆ ಕಟ್ಟುತ್ತಾನೆ' ಅಂತ. ಸೇವಕ ಜವಳಿ ವ್ಯಾಪಾರಿಯ ಹತ್ತಿರ ಹೋಗಿ ಕೇಳಿದ, 'ಏನು, ನಿನಗೆ ಇದು ಬೇಕೇನು? ಇದಕ್ಕೆ ಏನು ಕೊಡಬಲ್ಲೆ?' ಅಂತ. ಆತ ಹೇಳಿದ, 'ಹೌದು, ಇದು ಸ್ವಲ್ಪ ಬೆಲೆ ಬಾಳೋದೆ. ಇದರಿಂದ ಒಳ್ಳೇ ಒಡವೆ ಮಾಡಿಸಬಹುದು. ನಾನು ಇದಕ್ಕೆ ಒಂಬೈನೂರು ರೂಪಾಯಿ ಕೊಡಬಲ್ಲೆ' ಅಂತ. ಸೇವಕ ಹೇಳಿದ, 'ನೀನು ಇನ್ನು ಸ್ವಲ್ಪ ಜಾಸ್ತಿಯಾಗಿ ಏನಾದರೂ ಕೊಡುವುದಾದರೆ ನಿನಗೆ ಮಾರಿ ಬಿಟ್ಟು ಹೋಗುತ್ತೇನೆ. ಹೋಗಲಿ, ಒಂದು ಸಾವಿರ ರೂಪಾಯಿ ಕೊಡಬಲ್ಲೆಯಾ?' ಅಂತ. ಜವಳಿ ವ್ಯಾಪಾರಿ ಉತ್ತರ ಕೊಟ್ಟ, 'ಇನ್ನು ಹೆಚ್ಚಾಗಿ ಆಸೆ ಪಡಬೇಡ. ನಾನು ಆಗಲೇ ಪೇಟೆ ಧಾರಣೆಗಿಂತ ಸ್ವಲ್ಪ ಅಧಿಕವಾಗಿಯೇ ಬೆಲೆ ಕಟ್ಟಿಬಿಟ್ಟಿದ್ದೇನೆ. ಇದರ ಮೇಲೆ ಒಂದು ರೂಪಾಯಿಯನ್ನು ಕೂಡ ಜಾಸ್ತಿ ಯಾಗಿ ಕೊಡಲಾರೆ. ಇಚ್ಛೆಯಿದ್ದರೆ ಕೊಟ್ಟು ಹೋಗು' ಅಂತ. ಸೇವಕ ಆ ವಜ್ರವನ್ನು ಹಿಂದಕ್ಕೆ ತೆಗೆದುಕೊಂಡು ನಗುತ್ತ ಯಜಮಾನನ ಹತ್ತಿರಕ್ಕೆ ಬಂದು ಹೇಳಿದ, 'ಈತ ಒಂಬೈ ನೂರಕ್ಕಿಂತ ಜಾಸ್ತಿಯಾಗಿ ಒಂದು ರೂಪಾಯಿಯನ್ನು ಕೊಡ ಲಾರನಂತೆ ಮತ್ತು ಈತನೂ ಆಗಲೇ ಪೇಟೆಧಾರಣೆಗಿಂತ ಜಾಸ್ತಿ ಬೆಲೆಯನ್ನು ಕಟ್ಟಿಬಿಟ್ಟಿದ್ದಾನಂತೆ.' ಯಜಮಾನ ನಗುತ್ತ ಹೇಳಿದ, 'ಈಗ ಇದನ್ನು ಒಬ್ಬ ರತ್ನವ್ಯಾಪಾರಿಯ ಹತ್ತಿರ ತೆಗೆದುಕೊಂಡು ಹೋಗು. ಆತ ಏನು ಬೆಲೆ ಕಟ್ಟುತ್ತಾನೆ ನೋಡೋಣ.' ಸೇವಕ ರತ್ನವ್ಯಾಪಾರಿಯ ಹತ್ತಿರಕ್ಕೆ ಬಂದು ತೋರಿಸಿದ. ಆತ ಅದರ ಕಡೆಗೆ ಕಣ್ಣು ಹಾಯಿಸಿದೊಡನೆಯೇ ಹೇಳಿದ, 'ಇದಕ್ಕೆ ನಾನು ಒಂದು ಲಕ್ಷ ರೂಪಾಯಿ ಕೊಡು ತ್ತೇನೆ.'''